## ಕಥೆ

ಬೇರೆಯವರು ತಿನ್ನೋದನ್ನ ನೋಡಾಕಾದ್ರೂ ಸಂಜಿಮುಂದ ರಾಜಸ್ಥಾನಿಯವನ ಅಂಗಡಿ ಹತ್ತಿರ ಹಾಜರಿರುತ್ತಿದ್ದ. ಅದರ ವಾಸ್ನಿಗೆ ಇವನ ಹೊಟ್ಟೆಯ ಬಾಯಿ ತಂತಾನೆ ತೆರೆದುಕೊಂಡುಬಿಡ್ತಿತ್ತು. ತನ್ನ ಜೊತಿಗೆ ದ್ಯಾಮನನ್ನೂ ಸೇರಿಸಿ ತನ್ನ ಕೇರಿಯ ಮೂರ್ನಾಲ್ಕು ಗೆಳೆಯರಿಗೆ ಗೋಬಿಯ ಕುರಿತು ಭಯಂಕರ ವರ್ಣನೆ ಮಾಡಿ ಆಸೆ ಹುಟ್ಟಿಸಿಬಿಟ್ಟದ್ರಿಂದ ಅವ್ರೂ ಭರ್ಮನ ಜೊತೆ ಕುತೂಹಲದಿಂದಲೂ ಆಸೆಬುರುಕತನದಿಂದಲೂ ಬರಾಕ ಶುರು ಮಾಡಿದ್ದರು. ಅಂಗಡಿ ಹತ್ತಿರ ಹೋಗಿದ್ದ ತಡ ಗೋಬಿಯ ವಾಸನಿ ಮೂಗಿಗೆ ಅಡರಿ ಅವ್ರೂ ಕೂಡ ಭರ್ಮನ ಹಾಗೆ ಬಾಯಾಗ ನೀರೂರಿಸಿಕೊಳ್ತ ನಿಲ್ಲುತ್ತಿದ್ರು. ಭರ್ಮ, ಗಿರಾಕಿಗಳು ಗೋಬಿ ತಿನ್ನಾಕ ಬಾಯಿ ತೆಗೆದ್ರ ತಾನೂ ತೆಗೆದು, ಅವ್ರು ತಿನ್ನತೊಡಗಿದ್ರ ತಾನೂ ತಿನ್ನುವಂಗ ಬಾಯಿ ಆಡಿಸಿ ಉಗುಳು ನುಂಗ್ತಿದ್ದ.

ಗೋಬಿ ಗುಂಗಿನೊಳಗ ಒಮ್ಮೆ ಮೈಮರೆತ ಭರ್ಮ ಅಕಸ್ಮಿಕವಾಗಿ ಸಿದ್ಧನ ಚಹಾದಂಗಡಿಯ ಬಾಗಿಲ ಮುಂದ ನಿಂತುಬಿಟ್ಟ. ಸಿದ್ಧ ಬಂದಾವ್ನ ಅವನ ತಲಿಗೆ ಜೋರಾಗಿ ಪಟ್ ಅಂತ ಹೊಡೆದು 'ಅಂಗಡಿನೇನ್ ಮುರ್ಚಟ್ ಮಾಡಬೇಕಂತ ಅನ್ಕೊಂಡಿಯೇನಲೇ ಬದ್ಮಾಶ್, ಆಕ್ಕಡೆ ದೂರ ನಿಲ್ ಮಗನ' ಅಂತಂದು ಗದರಿದ್ದ. ಅಲ್ಲಿ ಬೇರೆ ಮೂರ್ನಾಲ್ಕು ಹುಡುಗ್ರು ನಿಂತಿದ್ರೂ ಕೇರಿಯವನೊಬ್ಬ ತನ್ನ ಅಂಗಡಿಯ ಬಾಗಿಲವರೆಗೆ ಬಂದು ನಿಂತಿದ್ದನ್ನು ಸಹಿಸಿಕೊಳ್ಳದ ಸಿದ್ಧ ಉಳಿದವರನ್ನೆಲ್ಲಾ ಬಿಟ್ಟು ಭರ್ಮನಿಗೆ ಮಾತ್ರ ಬೈದಿದ್ದ. ಸಂಜಿಕಡೆ ತಾನು ಮಾಡ್ತಿದ್ದ ಮಿರ್ಚಿ ಬಜಿಗಿಂತ ಸಣ್ಣಾವ್ರೂ ದೊಡ್ಡಾವ್ರೂ ಅನ್ನದ ಎಲ್ಲರೂ ಆ ರಾಜಸ್ಥಾನಿಯವನ ಗೋಬಿಗೆ ಮಾರುಹೋಗಿದ್ದರಿಂದ ಅವನ ವ್ಯಾಪಾರ ಸರಿಯಾಗಿ ಕುದುರ್ತಿಲ್ಲ ಎನ್ನುವ ಅಸಹನೆಯೂ ಅವನಲ್ಲಿತ್ತು. ಅವನ ಹೆಂಡತಿ ಗಿರಿಜಾಳಿಗೆ ಸಿದ್ಧನ ವರ್ತನೆ ಬೇಜಾರು ತರಿಸಿದ್ರೂ ಭರ್ಮ ಕೇರಿಯ ಹುಡುಗನಾಗಿದ್ದಕ್ಕೆ ಗಂಡನಿಗೆ ಆಕ್ಷೇಪವೇನೂ ಎತ್ತಲಿಲ್ಲ. ಆದ್ರ ಸಿದ್ಧ ಯಾಕ ಹಂಗ ಬೈದು ಹೊಡೆದ? ತನ್ನದೇನು ತಪ್ಪಿತ್ತು? ಅನ್ನೋದೆ ಹೊಟ್ಟ ಭರ್ಮನಿಗೆ ಗೊತ್ತಾಗ್ಲಿಲ್ಲ. ನೋಡಿದಾಗಲೊಮ್ಮೆ ಗುರಾಯಿಸ್ತಿದ್ದ ಸಿದ್ಧನನ್ನು ಕಂಡ್ರ ಅವನಿಗೆ ಹೆದರಿಕಿಗಿಂತ ಸಿಟ್ಟೆ ಜಾಸ್ತಿ ಬರ್ತಿತ್ತು.

ಭರ್ಮನ ತಂದೆ ಮೈಲೆಪ್ಪ ಒಮ್ಮೆ ಬಜಿ ತಿನಿಸಾಕಂತ ತನ್ನನ್ನು ಇದೇ ಸಿದ್ಧನ ಅಂಗಡಿಗೆ ಕರೆದುಕೊಂಡು ಬಂದಿದ್ದಾಗ ಪೇಪರಿನಲ್ಲಿ ಒಂದಿಷ್ಟು ಖಾರಮಂಡಾಳ, ನಾಕು ಮಿರ್ಚಿ ಬಜಿ ಹಾಕಿ ಅಂಗಡಿಯ ಹಿಂದೆ ದೂರ ನಿಲ್ಲಿಸಿಯೇ ಕೊಟ್ಟು ನೀರನ್ನು ಎತ್ತರದಿಂದ ಬೊಗಸೆಗೆ ಸುರಿದಿದ್ದು ನೆನಪಾತು. ಬೇರೆಯವರು ಒಳಗೆ ಕುಳಿತು ತಾವು ಮಾತ್ರ ಯಾಕೆ ಹಿಂಗ ಹೊರಗ ನಿಂತು ತಿನ್ನಬೇಕನ್ನುವ ಪ್ರಶ್ನೆ ಭರ್ಮನ ಎಳೆ ಮೆದುಳನ್ನು ತಿನ್ನತೊಡಗಿತ್ತು. ಇದೆ ಪ್ರಶ್ನೆಯನ್ನು ಮೈಲೆಪ್ಪನಿಗೆ ಕೇಳಿದ್ದಕ್ಕ, 'ನಾಕ್ ದಿನ ಸಾಲಿಗೆ ಹೋಗಿ ಇಲ್ಲದ್ ಕಿಸಿಬ್ಯಾಡ' ಅಂತ ತಲೆಗೊಂದು ಕುಕ್ಕಿ ಮನಿಗೆ ಕಳಿಸಿದ್ದ. ಮೈಲೆಪ್ಪಗ, ಮ್ಯಾಗಲೋಣಿ ಫಕೀರನ ಸೆಕೆಂಡ್ ಹ್ಯಾಂಡ್ ಎಕ್ಸೆಲ್ ಗಾಡಿ ಕೊಳ್ಳಬೇಕೆನ್ನುವ ವಿಚಾರಕ್ಕ ತಲಿಬಿಸಿಯಾಗಿತ್ತು. ಫಕೀರ ತನ್ನ ಗಾಡಿ ಮಾರಿ ಹೊಸ ಬೈಕ್ ತೆಗೆದುಕೊಳ್ಳುವ ವಿಚಾರ ಇವನಿಗೆ ತಿಳಿದು ತನ್ನ ಇದ್ದಿಲು ಬಟ್ಟಿಯಿಂದ ಇದ್ದಿಲನ್ನು ಚೀಲದಾಗ ತುಂಬ್ಕೊಂಡು ಊರೂರು ತಿರುಗಿ ಮಾರಾಕ ಈ ಗಾಡಿ ಇದ್ರ ಛಲೊ ಅನಿಸಿ ಅದನ್ನು ಕೊಳ್ಳಲು ಬಯಸಿದ್ದ. ಆದ್ರ ಅಷ್ಟೊಂದು ರೊಕ್ಕ ತನ್ನ ಬಳಿ ಇರಲಾರದಕ್ಕ ಚಿಂತಿ ಹತ್ತಿತ್ತು.

ಸಿದ್ಧ ಕೊಟ್ಟ ಏಟು, ಅವ ನಡೆದುಕೊಂಡ ರೀತಿಯಿಂದ ಭರ್ಮನ ಎಳೆ ಮನಸ್ಸು ಘಾಸಿಗೊಂಡಿತ್ತು. ಅದಕ್ಕೆ ಅಂದಿನಿಂದ ದೂರವೆ ನಿಂತು, ರಾಜಸ್ಥಾನಿಯವನು ತನ್ನೆಡೆಗೆ ನೋಡುವನೇನೋ, ತನ್ನ ಹತ್ರ ರೊಕ್ಕ ಇಲ್ಲದ ಅಸಹಾಯಕತೆ ಅರ್ಥ ಮಾಡಿಕೊಂಡು 'ಬಾರ್ಲೆ ಭರ್ಮ್ಯಾ, ತಗೊ ತಿಂದು ಸಾಯಿ' ಅಂತಂದು ಒಂದು ಪ್ಲೇಟ್ ಕೊಡುವನೇನೋ ಎಂದು ಅವನನ್ನೇ ಆಸೆಗಣ್ಣಿನಿಂದ ನೋಡುತ್ತ ಬಾಯಿ ಮತ್ತು ಕಣ್ಣುಗಳಲ್ಲಿ ನೀರು ತುಂಬಿಕೊಂಡೆ ನಿಂತುಬಿಡುತ್ತಿದ್ದ. ಗೋಬಿ ತಿನ್ನುವ ತನ್ನ ಆಸೆ ಅದುವರೆಗೂ ಈಡೇರದಿದ್ದಕ್ಕ ದುಃಖ ಹೆಚ್ಚಾಗಿ ಅಳು ಬಂದು ಕಣ್ಣೀರು ಬುಳು ಬುಳು ಇಳಿದುಬಿಡುತ್ತಿದ್ದವು. ಕಣ್ಣೊರೆಸಿಕೊಳ್ಳುತ್ತಾ ಮನಿಗೆ ಬಂದು ಮಲಗಿದ್ರ ಬೀಳುತ್ತಿದ್ದ ಕನಸುಗಳೂ ಗೋಬಿ ಮಂಚೂರಿಯವೇ. ಕನಸಿನ್ಯಾಗ ಗೋಬಿ ಸಿಕ್ಕ ಖುಷಿಗೆ ನಿದ್ದೆಗಣ್ಣಿನಲ್ಲಿಯೇ ಮುಲು ಮುಲು ನಗುತ್ತಿದ್ದ ಭರ್ಮ ಎಚ್ಚರವಾದಾಗ ತಾನು ಮುರುಕು ಚಾಪಿ ಹರಿದ ಕೌದಿಯಲ್ಲಿಯೆ ಬಿದ್ದಿದ್ದು ಕಂಡು ರಾಜಸ್ಥಾನಿ ಹುಡುಗ ಇಲ್ಲೇ ಎಲ್ಲೋ ತನ್ನ ಗೋಬಿಯ ಗಾಡಿಯನ್ನು ತಳ್ಳಿಕೊಂಡು ಹೋಗುತ್ತಿರಬೇಕೆಂದು ಅಂಗಳಕ್ಕೆ ಬಂದು ಸುತ್ತಲೂ ಹುಡುಕುತ್ತಿದ್ದ. ತನಗೆ ಬಿದ್ದದ್ದು ಕನಸು ಎಂದು